

ಆತನ ಪೂರ್ವಾನುಭವದ ಜ್ಞಾನ ಎಲ್ಲರ ಒಳಿತಿಗೆ ಅನುಕೂಲವಾಗುತ್ತದೆ.

ನವೆಂಬರ್ ತಿಂಗಳಿಂದ ಫೆಬ್ರುವರಿವರೆಗೆ ಹಕ್ಕಿಗಳ ವಲಸೆ ನಡೆಯುತ್ತದೆ. ನಾನಾ ದೇಶಗಳ ಹಕ್ಕಿಗಳು ತಮ್ಮ ಆಹಾರ ಹುಡುಕಿಕೊಂಡು ಖಂಡಾಂತರಗಳ ದಾಟಿ ಬರುವ ಪ್ರಕ್ರಿಯೆ ಸಾವಿರಾರು ವರುಷಗಳಿಂದ ಅಬಾಧಿತವಾಗಿ ನಡೆದುಕೊಂಡು ಬಂದಿದೆ. ಈ ಸಂಗತಿ ಯೋಚಿಸಿದಷ್ಟೂ ರೋಚಕ ಎನಿಸುತ್ತದೆ. ಇವುಗಳ ಬೌದ್ಧಿಕ ತಿಳಿವಳಿಕೆ ಆಶ್ಚರ್ಯ ಹುಟ್ಟಿಸುತ್ತದೆ.

ಅಷ್ಟು ಪುಟ್ಟ ಮೆದುಳಿನಲ್ಲಿ ಆಗಲೇ ಗೂಗಲ್ ಮ್ಯಾಪ್ ಪ್ರತಿಷ್ಠಾಪಿಸಿಕೊಂಡಿರುವ ಖಗಗಳ ಕೌಶಲ್ಯವೇ ಅತ್ಯದ್ಭುತ. ಸ್ಥಳೀಯ ಹಕ್ಕಿಗಳ ಜೊತೆ ಕೊಡುಕೊಳು ಮಾಡಿಕೊಂಡು ಬದುಕುವ ವಲಸೆ ಹಕ್ಕಿಗಳಲ್ಲಿ ಸಂಕೋಚ ಮತ್ತು ಭಯ ಸಹಜವಾಗಿಯೇ ಹೆಚ್ಚಾಗಿರುತ್ತದೆ. ಹೊಸ ಜಾಗಕ್ಕೆ ಹೋದಾಗ ಅಂಜಿಕೆ, ಅಭದ್ರತೆಗಳು ನಮ್ಮನ್ನು ಕಾಡುವಂತೆ ಅವಕ್ಕೂ ಆಗುವುದು ಸಹಜವೇನೆ.

ಒಮ್ಮೆ ವಲಸೆ ಬಂದ ಹಕ್ಕಿಗಳಿಗೆ ಆಹಾರದಲ್ಲಿ ವ್ಯತ್ಯಯವಾದರೆ, ಜೀವಭಯ ಉಂಟಾದರೆ, ಪರಿಸರ ಕಲುಷಿತವಾದರೆ, ಅವು ತಮ್ಮ ಆಗಮನ ಸ್ಥಳಗಳನ್ನು ಶಾಶ್ವತವಾಗಿ ತೊರೆಯುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಇಷ್ಟೆಲ್ಲದರ ನಡುವೆ ಆ ವಲಸೆ ಹಕ್ಕಿಗಳಿಗೂ ನಮ್ಮ ಸ್ಥಳೀಯ ಪಕ್ಷಿಗಳಿಗೂ ಯಾವುದಾದರೂ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದು ಜಗಳ, ದೊಂಬಿ, ಮಾರಾಮಾರಿ, ಖೂನಿ ಏನಾದರೂ ಆಗುತ್ತದೆಯೋ ಇಲ್ಲವೋ? ಎನ್ನುವುದು ನನಗೂ ತಿಳಿಯದ ವಿಚಾರ.

ನಾರಾಯಣ ಅವರ ಹಿರಿಯಣ್ಣ ದಾಸ್ ಕರ್ವಿ ಕೂಡ ನಮ್ಮೊಂದಿಗೆ ಬಂದಿದ್ದರು. ನಾಡದೋಣಿ ನಡೆಸಲು ಇಬ್ಬರು ಬೇಕು. ಒಬ್ಬರು ಡ್ರೈವರ್ ಆದರೆ ಮತ್ತೊಬ್ಬರು ಕಂಡಕ್ಟರ್. ಆದರೆ ಇಬ್ಬರ ಕೈಯಲ್ಲೂ ಉದ್ದ ಗಳದ ಸ್ಟೇರಿಂಗ್ ಇರಲೇಬೇಕು. ಕೆಲವೊಮ್ಮೆ ನೀರು ತೆಳುವಾದ ಕಡೆ ಮರಳಿನಲ್ಲಿ ದೋಣಿ ಸಿಕ್ಕಿಬೀಳುತ್ತಿತ್ತು. ಆಗ ನೀರಲ್ಲಿಳಿದು ನೂಕುವ ಕೆಲಸವನ್ನು ಒಬ್ಬರು ಕಡ್ಡಾಯವಾಗಿ ಮಾಡಲೇಬೇಕಿತ್ತು. ದಾಸ್ ಕರ್ವಿ ಮುಗ್ಧ ಜೀವಿ. ಅತೀವ ಕಳಕಳಿಯ ಮನುಷ್ಯ. ನಮಗೆ ಪದೇ ಪದೇ, 'ಹೆದರಬೇಡಿ ಸರ್ರೂ, ಎಲ್ಲಾ ತೋರಿಸೋಣ. ಚೆಂದಚೆಂದ ತೆಗೀರಿ. ಒಟ್ಟು ನಿಮ್ಮ ಕ್ಯಾಮೆರಾ ಫುಲ್ ಆಗಬೇಕು. ನೀವು ನಮ್ಮ ಗೆಸ್ಟು. ನಿಮ್ಮ ಕಾಳಜಿ ನಾವು ಮಾಡಬೇಕು' ಎಂದು ಚಡಪಡಿಸುತ್ತಿದ್ದರು. ನಡುನಡುವೆ 'ಈ ಗಳ ನೀರಿಗೆ ಹಾಕಿ ದಮ್ಮು ಬಿಟ್ಟು ನೂಕಬೇಕು ಸರ್ರೂ. ಇದು ಕಾಣವಷ್ಟು ಸಲೀಸಲ್ಲ. ಸೊಂಟ ರಪ್ಪ ಬಿದ್ದೋಗುತ್ತೆ. ರಾತ್ರಿ ಬೆಚ್ಚ ಬಣ್ಣದ ನೀರು ಇಳಿದೇ ಇದ್ರೆ ನಿದ್ದೆ ಹತ್ತಲ್ಲ' ಎಂದು ಹಲ್ಲುಕಳೆದು ಹೇಳುತ್ತಲೇ ಇದ್ದರು. 'ಎಷ್ಟು?' ಎಂದಾಗ ಮುಷ್ಠಿ ಮುಚ್ಚಿ ಅರ್ಧ ಅಡಿಯ ಅಳತೆ ತೋರಿಸಿ 'ಇಷ್ಟೇ!' ಎಂದು ನಕ್ಕರು.



ಓಸ್ಪ್ರೈ (ಮೀನುಡೇಗೆ) ಎಂಬ ಹದ್ದು ಮೀನು ಹಿಡಿಯುವುದರಲ್ಲಿ ನಿಷ್ಣಾತ ಎಂದು ಹೆಸರು ಮಾಡಿದೆ. ಅದನ್ನು ನೋಡಿ ಅದರ ಪಟ ತೆಗೆಯಬೇಕೆಂಬುದು ನಮ್ಮ ಆ ದಿನದ ಪ್ರಮುಖ ಆಸೆಯಾಗಿತ್ತು. ಸಾಧ್ಯವಾದಷ್ಟು ಅದರ ಕಡೆಗೆ ಹೆಚ್ಚು ಗಮನ ಕೊಡುವಂತೆ ನಾವಿಕನಿಗೆ ಹೇಳುತ್ತಲೇ ಇದ್ದೆವು. ತನ್ನ ಶಿಕಾರಿಯನ್ನು ಬೆನ್ನಟ್ಟಿ ಮಿಂಚಿನಂತೆ ಹಿಡಿಯುವ ಮೀನುಡೇಗೆ ಹದ್ದು ನೋಡಲು ಕೂಡ ಅಷ್ಟೇ ಸುಂದರ. ಮೀನನ್ನು ತನ್ನ ಚೂಪಾದ ಉಗುರುಗಳಲ್ಲಿ ಅದು ಹೆಕ್ಕಿ ಹಿಡಿದರೆ ಮುಗಿಯಿತು. ನುಣುಚಿಹೋಗುವ ಮಾತಂತೂ ಇಲ್ಲವೇ ಇಲ್ಲ. ತನ್ನ ಪ್ರಬಲವಾದ ಎರಡೂ ಪಂಜಗಳ ಸಹಾಯದಿಂದ ಮೀನನ್ನು ಚುಚ್ಚಿಕೊಂಡು ಆಗಸದಲ್ಲಿ ಹಾರುತ್ತದೆ. ತದನಂತರ ಸಾವಕಾಶವಾಗಿ ಕೂತು ಮೊದಲು ತಲೆಯನ್ನು ಸೀಳಿ ನಂತರ ಉಳಿದ ಭಾಗ ಪೂರೈಸುತ್ತದೆ.

ಇದರ ನಡುವೆ ಬಲು ಅಪರೂಪದ, ನಾವು ನಿರೀಕ್ಷಿಸದ ಮತ್ತೊಂದು ಹದ್ದು ಸಿಕ್ಕಿತು. ಅದೇ ಬಿಳಿ ಎದೆಪಟ್ಟಿಯ ಸಮುದ್ರ ಹದ್ದು (ವೈಟ್ ಬೆಲ್ಲೀಡ್ ಸೀ ಈಗಲ್). ಅದನ್ನು ಕಂಡು ಚಿತ್ರಿಸಲು ನಾಲ್ಕು ದಿನದಿಂದ ಡೇರೆ ಹೊಡೆದಿದ್ದ ಮುಂಬಯಿಯ ಒಂದು ತಂಡಕ್ಕೆ ಅದರ ಮುಖ ದರುಶನವೂ ಆಗಿರಲಿಲ್ಲ. ನಮಗಿಂತ ಮೊದಲೇ ಮತ್ತೊಂದು ದೋಣಿಯಲ್ಲಿದ್ದ ಅವರು ಹುಡುಕಿ ಹತಾಶರಾಗಿ ಹಿಂತಿರುಗಿದ್ದರು. ಅವರು ಹೊರಟು ಹೋದ ದಾರಿಯಲ್ಲೇ ನಮಗದು ಅಚಾನಕ್ಕಾಗಿ ಸಿಕ್ಕಿತು. ಇದೂ ಕೂಡ ಬೇಟೆಯಲ್ಲಿ ಓಸ್ಪ್ರೈ ಹದ್ದುವಿನಷ್ಟೇ ಪ್ರಬಲ ಶಿಕಾರಿದಾರ.

ಬ್ರಾಮಿಣಿ ಕೈಟ್, ರಿವರ್ ಟರ್ನ್, ಪ್ಲೋವೆರ್ಸ್, ಓಸ್ಟರ್ ಕ್ಯಾಚರ್ – ಹೀಗೆ ವಿವಿಧ ಆಂಗ್ಲ ನಾಮಾವಳಿಯ ಹಕ್ಕಿಗಳ ನೋಡಿದೆವು. ನೀರಿನ ಹಕ್ಕಿಗಳಲ್ಲಿ ಹೆಚ್ಚಿನವು ಬಿಳಿಬಣ್ಣದ್ದೇ ಆಗಿರುತ್ತವೆ. ಕೊಕ್ಕು ಹಳದಿ ಇಲ್ಲವೇ ಕೆಂಪು ವರ್ಣ, ಎದೆಯ ಭಾಗ ಕಂದು, ರೆಕ್ಕೆಯ ಕೆಲ ಭಾಗ ಕಪ್ಪು ಎನ್ನುವುದು ಬಿಟ್ಟರೆ ಉಳಿದಂತೆ ಶ್ವೇತ ವರ್ಣವೇ ಪ್ರಾಬಲ್ಯವಾಗಿರುತ್ತದೆ. ಒಟ್ಟಿಗೆ ರಾಶಿರಾಶಿ ಖಗಗಳ ನೋಡುವ ಇರಾದೆ ಇದ್ದರೆ ಆ ಜಾಗದ ಪಯಣ ನಿಜಕ್ಕೂ ಮನಸಿಗೆ ಉಲ್ಲಾಸ ಮತ್ತು ನೆಮ್ಮದಿ ತರುವಂತಹದ್ದು.

ಪ್ರತಿಕ್ರಿಯಿಸಿ: feedback@sudha.co.in